ಇವೊತ್ತಿನ ದಿವಸ, ಚಾಲ್ತಿ ಸಾಲ, ಬೆಳೆ ಸಾಲ, ಅಲ್ಪಾವಧಿ ಸಾಲ, ದೀರ್ಘಾವಧಿ ಸಾಲ ಇತ್ಯಾದಿಗಳನ್ನು ಕೊಡುತ್ತಾರೆ. ಈ ಸಾಲವನ್ನು ಪಡೆಯುವಾಗ ಅನೇಕ ಸಂದರ್ಭಗಳಲ್ಲಿ ರೈತರು ತೊಂದರೆಪಡಬೇಕಾಗಿದೆ, ಆದ್ದರಿಂದ ಈ ತೊಂದರೆಯನ್ನು ತಪ್ಪಿಸತಕ್ಕ ವ್ಯವಸ್ಥೆ ಮಾಡಬೇಕಾಗಿದೆ. ಹಗಲೆಲ್ಲ ರಿಪೋರ್ಟ್ ತೆಗದಂ ಕೊಂಡು ಸೊಸೈಟಿಗೆ, ಬ್ಯಾಂಕಿಗೆ ತೆಗೆದುಕೊಂಡಂ ಹೋಗುವ ಕ್ರಮ ಏನಿದೆ ಇದರಲ್ಲಿ ದೋಷ ಇದೆ. ಇದನ್ನು ಮೊದಲು ಹೋಗಲಾಡಿಸಬೇಕು. ಯಾವುದೇ ಸಾಲವಾಗಲಿ, ಭೂಮಿಯ ಹಿಡುವಳಿ, ಬೆಳೆಯತಕ್ಕ ಪ್ರದೇಶ ಹಾಗೂ ಅದರ ಬೆಲೆಗನುಗುಣವಾಗಿ ಸಾಲ ಕೊಡುವಂಥ ವ್ಯವಸ್ಥೆ ಆಗಬೇಕು. ಈ ದಿಸೆಯಲ್ಲಿ ಸರ್ಕಾರ ವಿಚಾರ ಮಾಡಬೇಕಾಗಿದೆ. ಬ್ಯಾಂಕ್ ಮತ್ತು ಸಹಕಾರ ಸಂಘಗಳ ನಡುವಣ ಸಂಬಂಧ ಏನಿದೆ ಅದರಿಂದ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಕೆಳಗಿನ ಸೊಸೈಟಿಗಳಿಗೆ ಅಡಚಣೆಯಾಗಂತ್ತಿದೆ. ಜಿಲ್ಲಾ ಬ್ಯಾಂಕುಗಳು ಏನಿವೆ ಅವು ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿ ತೆಗೆದುಕೊಳ್ಳುತ್ತಿವೆ. ಇದನ್ನು ಸರಳಗೊಳಿಸಬೇಕೆಂದು ಹೇಳಬಯಸುತ್ತೇನೆ. ಅನೇಕ ಮಾರ್ಕೆಟಿಂಗ್ ಸೊಸೈಟಿಗಳು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳು ಕೃಷಿ ಹುಟ್ಟುವಳಿಯ ಮೇಲಿರುವುದರಿಂದ ಆ ಸಂಸ್ಥೆಗಳಿಗೆ ಕೃಷಿ ಪದವೀಧರರನ್ನು ತೆಗೆದುಕೊಳ್ಳಬೇಕೆಂದು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾರ್ಕೆಟಿಂಗ್ ವಿಚಾರದಲ್ಲಿ ಪದವೀಧರರಾಗಿರುವವರನ್ನು ಇಲಾಖೆಯಲ್ಲಿ ಅಧಿಕಾರಿಗಳನ್ನಾಗಿ ಆಯ್ಕೆ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ರೈತರ ಹಿತದೃಷ್ಟಿಯಿಂದ ಸಹಕಾರಿ ಆಂಧೋಳನ ಬೆಳೆದುಬರಬೇಕಂ. ಗ್ರಾಮೀಣ ಪ್ರದೇಶಗಳಲ್ಲಿ ಶೈತ್ಯ ಗೃಹಗಳು, ಉಗ್ರಾಣಗಳು ಮತ್ತಿತರ ವ್ಯವಸ್ಥೆಗಳು ಆಗಬೇಕೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ವಿನಂತಿಸಿಕೊಂಡು, ಇಷ್ಟುಕಾಲ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ಸನ್ನ ಮಾತನ್ನು ಮುಂಗಿಸುತ್ತೇನೆ.

ಅಧ್ಯಕ್ಷರು.— ಇಲ್ಲಿಗೆ ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾಯವಾಯಿತು. ನಾಳೆ ಬೆಳಿಗ್ಗೆ ಮಂತ್ರಿಗಳು ಉತ್ತರ ನೀಡುವರು. ಈಗ ವಿದ್ಯುಚ್ಛಕ್ತಿ ಮಂತ್ರಿಗಳು ಒಂದು ಹೇಳಿಕೆಯನ್ನು ನೀಡಲಿದ್ದಾರೆ.

Statement by the Minister

reg : Withdrawal of load shedding

SRI J. S. DESHMUKH (Minister for Power, Mines & Geology).— Sir, there has been a number of representations from the rural areas to withdraw the load shedding of 6 hours for IP Sets each day because of drought conditions in the State. The Government after considering the difficulties of the rural podulation, have decided to withdraw this restriction with effect from August 15, 1 85 until a revised decision is taken on the level of power cut after the closure of monsoon.

MR. SPEAKER.—The House now stands adjourned to meet again tomorrow at 9.00 a.m.

The House adjourned at Eight Minutes past Eight of Clock to meet again at Nine of the Clock on Wednesday, the 14th day of August, 1985.